ಅವಳು ಹಿಂಸೆಯಿಂದ ಹೊರಬರಲು ಸಾಧ್ಯವಾಗಿಸುವ ಮೂಲಕ ಈ ಎರಡು ಕಥೆಗಳು ಹೋರಾಟದ ಆಚೆಗೂ ಜಿಗಿದು ಮಹಿಳಾ ಅಸ್ಮಿತೆಯನ್ನು ರೂಪಿಸಿವೆ. "ಆಗೀಗ ದುಡ್ಡಿಗೆ ತಾಪತ್ರಯ ಮಾಡ್ತಾನೆ ಅನ್ನೋದು ಬಿಟ್ರೆ ಬೇರೆ ತೊಂದ್ರೆ ಏನಿಲ್ಲ ಈಗ. ನಾ ಹೋಗೋದು ಲೇಟ್ ಆದ್ರೆ ಅಡಿಗೆ ಮಾಡಿರ್ತಾನೆ. ಅವನ ಬಟ್ಟೆ ಅವ್ನೇ ಒಕ್ಕೊತನೆ. ರಜಕ್ಕೆ ಅಂತ ಮಗಳು ಮನೆಗೆ ಬಂದಾಗ ಪಾರ್ಕಿಗೆ ಕರಕಂಡು ಹೋಗತಾನೆ. ಕೆಲ್ಸಕ್ಕೂ ಸರ್‍ಯಾಗಿ ಹೋಗ್ತಾನೆ. ಸದ್ಯ! ಎಲ್ಲದಕ್ಕಿಂತ ನಾನು ಈಗ, ಅವ್ನಿಗೆ ಹೆದ್ರಲ್ಲ ಅನ್ನದು ಗೊತ್ತಾಗಿದೆ". ಹಿಂಸೆಯಿಂದ ಬೆಂದುಹೋಗಿದ್ದ ಸಮೀನ ನಿರಾಳವಾಗಿರುವುದನ್ನು ಹಾಗೂ ಆತ್ಮ ಸ್ಥೈರ್ಯದಿಂದ ಕೂಡಿರುವುದನ್ನು ತಿಳಿಸುತ್ತವೆ.

ಖಾಸಗಿಯಾಗಿಸಿರುವ ಮಹಿಳೆಯರ ವಿಷಯಗಳನ್ನು ಮಹಿಳೆಯರೇ ಮನಸ್ಸು ಮಾಡಿದಾಗ ಮಾತ್ರ ಕಳಚಲು ಸಾಧ್ಯ. ಒತ್ತಾಸೆಯಾಗಿ ಧೈರ್ಯ ಮತ್ತು ನೆರವು ನೀಡುವವರು ಇದಕ್ಕೆ ಅಗತ್ಯ. ಸಂಯುಕ್ತಾಳಿಗೆ ತಾಯಿ ಮತ್ತು ಗೀತಾ ತೋರಿದ ನೆರವು ಮತ್ತು ಕಾಳಜಿ ಅವಳನ್ನು ಹಿಂಸೆಯಿಂದ ಹೊರಬರುವಂತೆ ಮಾಡಿದೆ. ಇಂತಹ ಸೋದರಿ ಭಾವದ ಜಾಲವೊಂದು ಕುಟುಂಬದಾಚೆ ಮಹಿಳೆಯರಿಗೆ ಅತ್ಯಂತ ಅಗತ್ಯವೂ ಮುಖ್ಯವೂ ಆಗಿದೆ.

ಸ್ತ್ರೀ ಸಂವೇದನೆಯನ್ನು ಸೂಕ್ಷ್ಮವಾಗಿ ಹಿಡಿದಿಡುವ ಸುಜಾತಾ ಅವರ ಕಥೆಗಳು ಪ್ರತಿಭಟನೆಯಾಗಿ ಕಾಣಿಸುವುದಿಲ್ಲ. ಅದರೊಳಗೊಂದು ತೀರ್ಪು ನೀಡುವ ನೆಲೆಯಾಗಿಯೂ ಕಾಣದೆ, ಪ್ರಕೃತಿಯ ಲೀಲೆಯೊಳಗಿನ ಜೀವಜಾಲವಾಗಿ ರೂಪುಗೊಳ್ಳುವುದು ವಿಶೇಷ. ಪ್ರಕೃತಿಯ ವೈವಿಧ್ಯ ನೋಟಗಳ ಮೂಲಕವೇ ಮನುಷ್ಯರೂ ಇದರಿಂದ ಹೊರತಲ್ಲವೆಂಬುದನ್ನು ನಿರೂಪಿಸಿದ್ದಾರೆ.

ಏನು ಘಟಿಸುತ್ತದೋ, ಯಾವುದು ತಪ್ಪು ಎಂದು ಲೋಕಗ್ರಹಿಕೆ ಇದೆಯೋ ಅದೆಲ್ಲವನ್ನು ಮೀರಿದ ಬದುಕೊಂದು ನಮ್ಮೊಳಗೂ ಹೊರಗೂ ಇರುತ್ತದೆ ಎಂಬ ಸತ್ಯವನ್ನು ಯಾರೂ ಮರೆಯಲು, ಮರೆಮಾಚಲು ಸಾಧ್ಯವಿಲ್ಲ. ಆದರೆ, ಅದರೊಳಗೆ ನೋಯುವ ಮತ್ತು ಬೇಯುವ ಕ್ರಿಯೆ ಇತರೆ ಪ್ರಾಣಿಜಗತ್ತಿನ ವ್ಯವಹಾರದಲ್ಲಿ ಹೇಗಿದೆಯೋ ಅದನ್ನು ಬಗೆಯಲಾಗದು. ಮನುಷ್ಯ ಮನುಷ್ಯರೊಳಗಿನ ಬೇಗುದಿಗೆ ಮದ್ದನ್ನು ಅರೆಯಲಾಗದು. ಇದನ್ನು ವಿವರಿಸುವಂತೆ, "ಬಿದ್ದ ಮುತ್ತನ್ನು ಆರಿಸಿಕೊಡಲೇ ಎಂದು ತನ್ನ ಗೆಳೆತನಕ್ಕೆ ತಾನೇ ಸಮ್ಮಾನವನ್ನೇನೋ ಒದಗಿಸಿಕೊಟ್ಟ. ಆದರೆ... ಅದನ್ನು ಪೋಣಿಸುವ ಏಕಾಗ್ರತೆ, ಅದಕ್ಕೆ ಸಂದ ಆ ಹೊತ್ತು... ಸಂದಿಗೊಂದಿಯಲ್ಲಿ ಕಳೆದುಹೋದ ಮುತ್ತಿನ ಕೊರೆಯಲ್ಲಿ, ಅದು ಮತ್ತೆ ಮೊದಲಿನ ಹಾರವಾಗಬಲ್ಲದೇ?" – 'ಪ್ರಾಣದ ಗೆಳೆಯ'ದ ಈ ಸಾಲುಗಳು ಬಹುಮುಖ್ಯವಾಗಿ ಸಂಬಂಧಗಳ ಎಳೆಗಳನ್ನು ಬಿಚ್ಚಿಡುತ್ತವೆ. ಮೊದಲ ಕಥೆಯಲ್ಲಿನ ಸೆಲ್ವ ಹೇಳುವ ಈ ಮಾತು "ಇದು ಇರದೆ ಹಿಂಗಲ್ಲವಾ..." ಬದುಕಿನ ಹಲವು ಸಂಕಟಗಳ ಕಾಣ್ಕೆಯಾಗಿದೆ. ಪ್ರತಿಯೊಬ್ಬರ ಬದುಕು ಇದಕ್ಕೆ ಹೊರತಲ್ಲ. ಇದನ್ನು ಮೀರಿಯೇ ಮುಂದೆ ಹೋಗುವ, ಅದಕ್ಕಾಗಿ ಎಲ್ಲರೂ ಎಲ್ಲವನ್ನು ಪೋಣಿಸಿ ಹಾರ ಮಾಡೇ ಬಿಡುತ್ತೇವೆಂಬ ಹಂಬಲ ಇದ್ದರೂ ಸಾಧ್ಯವಾಗಿಸುವ ನೆಲೆಯಲ್ಲಿ ಸಮಾಜ ಇನ್ನು ಹಲವು ಸಾಧ್ಯತೆಗಳನ್ನು ಕಾಣಿಸಬೇಕಿದೆ. ಜಾತಿ, ಲಿಂಗ, ವರ್ಗದ ನೆಲೆಯಲ್ಲಿ ಸಮಸಮಾಜ ಕಟ್ಟುವ ನೆಲೆಯ ಶೋಧವಾಗಿ ಇವರ ಎಲ್ಲ ಕಥೆಗಳು ಇರುವುದನ್ನು ಕಾಣಬಹುದು. ಇದಕ್ಕೆ ಪ್ರತಿಮೆಯಂತೆ ಅವರ 'ಬಿಡದಾ ಮಾಯೆ' ಕಥೆಯ ಈ ಕೆಳಗಿನ ಸಾಲುಗಳು ಮುಖ್ಯವಾಗುತ್ತವೆ.

'ಭೂಮಿ ಆಕಾಶದ ನಡುವೆ ಸಂತರಂತೆ ತಮ್ಮ ನೆಲೆಯನ್ನು ಹುಡುಕಿ ಸಂತೆಯ ಗಜಿಬಿಜಿಯೊಂದಿಗೇ ಚಲಿಸುತ್ತಿದ್ದವು. ಕಾಯುತ್ತಾ ನಿಂತ ಮರಗಳೆಲ್ಲ ಹಕ್ಕಿಯ ಕಾಲಿನ ಊರುಗೋಲೊಂದಿಗೆ ಮಾತಾಗುತ್ತಿದ್ದವು. ಹಕ್ಕಿಗಳ ಗುಡ್ಡೆ ಪಂಚಾಯತಿ ಮುಗಿಯಲು ಇನ್ನೂ ವೇಳೆಯಿತ್ತು'.

ಈ ಬದುಕೇ ಮುಗಿಯದ ಪಂಚಾಯತಿ. ಕಾಲದಿಂದ ಕಾಲಕ್ಕೆ ಬದಲಾಗುವ ಬದುಕು ಏಕಮುಖವಾಗಿಲ್ಲ, ಇರಲು ಸಾಧ್ಯವಿಲ್ಲ. ಆದರೆ, ಮಾನವನ ತೆವಲು ಎಂತಹದೆಂದರೆ ಅದನ್ನು ಏಕವಾಗಿಸುವ ಚಟ. ಈ ಚಟದ ಚಲನೆಗೆ ಎಲ್ಲ ದಾರಿಗಳು ಕೂಡುವುದಿಲ್ಲ. ಕೂಡಿದರೂ ಮತ್ತೆ ಕವಲೊಡೆಯುವ ವಾಂಛೆ ಜೀವಿಗಳ ಲಕ್ಷಣ. ಇದನ್ನು ಈ ಕಥಾಸಂಕಲನ ಹಿಡಿದಿಟ್ಟಿದೆ. ಒಂದೇ ದಾರದ ಎಳೆಯಾಗಿ ಸುತ್ತುತ್ತಾ ಕವಲುಗಳನ್ನು ಬಿಟ್ಟುಕೊಳ್ಳುತ್ತಾ ಹೋಗುವ ಜಾಯಮಾನವನ್ನು ಹೊಂದಿವೆ. ●